ಶೇಖರನ ತಂದೆತಾಯಿಯರದ್ದು ಕೆಲವು ತಿಂಗಳಿನಿಂದ ಒಂದೇ ಗೋಳು. ಮಗಳ ಮನೆಯಲ್ಲೇ ಅವರೂ ಒಂದು ಕೋಲಿಯಲ್ಲಿರುತ್ತಾರೆ. ಬದುಕೀ ಬದುಕಿ ಇನ್ನೆಷ್ಟು ದಿನ ಬದುಕಬಹುದು, ಮಗನ ಚಿಂತೆಯಲ್ಲಿ ಇಬ್ಬರೂ ಈಗಾಗಲೇ ಎಲುಬಿನ ಹಂದರವಾಗಿದ್ದಾರೆ.'

ಓಹೋ! ನನಗಾಗಿ ನೋಡಿರುವ ಕನ್ಯೆ ಈ ಸುಮನಳೇ! ಅವರು ಮನೆಯನ್ನು 'ಮಗಳ ಮನೆ' ಅಂತ ಸಲೀಸಾಗಿ ಹೇಳುವುದನ್ನು ನೋಡಿದರೆ ದಾದಾ ಈಗಾಗಲೇ ತಮ್ಮ ಮನಸ್ಸಿನಲ್ಲಿ ನನ್ನ ಮತ್ತು ಸುಮನನ ಮದುವೆ ಮಾಡಿ ಮುಗಿಸಿದಂತಿದೆ ಎಂದು ಬಟಾಟೆ ಹೋಳಿಗೆ ಅಂಟಿರುವ ಸಿಪ್ಪೆ ತೆಗೆದು ತಿನ್ನುತ್ತ ಪುರು ತಲೆ ಕೆಡಿಸಿಕೊಳ್ಳುತ್ತಿದ್ದ. ಏನೋ ಒಂದು ನಿರ್ಧಾರ ಮಾಡಬೇಕೆಂದುಕೊಳ್ಳುತ್ತಲೇ ಪುರುವಿನ ಬಟ್ಟಲಲ್ಲಿ ಬಟಾಟೆಯ ಸಿಪ್ಪೆಯ ರಾಶಿ ದೊಡ್ಡದಾಗುತ್ತಲೇ ಹೋಯಿತು.

ತಾನು ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತವೆಂಬಂತೆ ಸುಮನಳನ್ನು ಮದುವೆ ಮಾಡಿಕೊಂಡು, ಶೇಖರನ ತಂದೆತಾಯಿ ಬದುಕಿರುವ ವರೆಗೆ ಆಸರೆಯಾಗಿ ದೊಡ್ಡತನವನ್ನು ಮೆರೆಯುವ ಬಯಕೆಯಲ್ಲಿ ಯಾವ ತಪ್ಪು ಕಾಣಿಸಲಿಲ್ಲ. ಶೇಖರನ ಮನೆಯಲ್ಲಿ ತಪ್ಪಿತಸ್ಥನಂತೆ ನಗಲೂ ಹೆದರಿಕೊಂಡು, ಸುಮನಳ ಕಡುಗಪ್ಪುಕಣ್ಣುಗಳಲ್ಲಿ ಶೇಖರನನ್ನು ಕಾಣುತ್ತ ಅವಳನ್ನು ಮುಟ್ಟಲೂ ಭಯಪಡುವ ಪ್ರಸಂಗ ಬಂದರೆ ಎಂಬ ದಿಗಿಲು ಅಂತರಾಳದಲ್ಲಿಲ್ಲದೇ ಇರಲಿಲ್ಲ.

ಪುರುವಿನ ತಲೆಯೊಳಗೆ ಹತ್ತುವರ್ಷದಿಂದ ಅನುಭವಿಸುತ್ತಿರುವ ಈ ತಲ್ಲಣಗಳು, ಒಳಗೆ ಬ್ಯಾಗಿನ ತುಂಬ ತುಂಬಿರುವ ಒಗೆಯದೆ ತಿರುವುಮುರುವಾಗಿ ಬಿದ್ದುಕೊಂಡ ಕಾಚಾ ಬನಿಯನುಗಳೆಲ್ಲ ಬಿಡುಗಡೆಗಾಗಿ ಹಾತೊರೆದು ಹಾರಾಡುತ್ತಿದ್ದವು. ಅದಾಗಲೇ ಆಳವಾಗಿ ಬೇರೂರಿದ ನೂರಾರು ಸಂದಿಗ್ಧಗಳು ಮುಕ್ತಿಯಿಲ್ಲದ ಪಿಶಾಚಿಯಂತೆ ಮೈಯನ್ನು ನಡುಗಿಸಿದಂತೆ ಭಾಸವಾಗತೊಡಗಿತು. ಶೇಖರನ ಕಪ್ಪುಕಣ್ಣುಗಳು ಮತ್ತೆ ತಿವಿಯ ತೊಡಗಿದವು; ಉಳಿಸುವಂತೆ ಮೊರೆಯಿಡತೊಡಗಿದವು...

**ಛಾಯಾ ಭಟ್**

ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ಲೇಖಕಿ ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದಿದ್ದಾರೆ. ಕತೆ, ಲೇಖನಗಳು ಕನ್ನಡದ ದೈನಿಕ ಹಾಗೂ ವಾರಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಮೂಲತಃ ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನವರು.